**ಸದನದಲ್ಲಿ ಉತ್ತರಿಸುವ**
**ಪ್ರಶ್ನೆಗಳ ಪಟ್ಟಿ**
**ಒಟ್ಟು ಪ್ರಶ್ನೆಗಳು – ೧೫**

**ಪಟ್ಟಿ–೧೩**

# ಕರ್ನಾಟಕ ವಿಧಾನ ಪರಿಷತ್ತು

## ನೂರ ಇಪ್ಪತ್ತೊಂಬತ್ತನೇ ಅಧಿವೇಶನ

## ಬುಧವಾರ, ದಿನಾಂಕ: ೧೫ನೇ ಜುಲೈ ೨೦೧೫

---

**ಸಮೂಹ – III**

೧. ಅರಣ್ಯ ಸಚಿವರು

೨. ಕಂದಾಯ ಸಚಿವರು

೩. ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು

೪. ಜವಳಿ ಹಾಗೂ ಬಂದರು ಮತ್ತು ಒಳನಾಡು ಜಲ ಸಾರಿಗೆ ಸಚಿವರು

೫. ಸಣ್ಣ ನೀರಾವರಿ ಸಚಿವರು

೬. ಯುವ ಸಬಲೀಕರಣ ಮತ್ತು ಕ್ರೀಡಾ ಹಾಗೂ ಮೀನುಗಾರಿಕೆ ರಾಜ್ಯ ಸಚಿವರು

೭. ಕಾರ್ಮಿಕ ರಾಜ್ಯ ಸಚಿವರು

---

## ರಾಜ್ಯದ ಕೆರೆಗಳ ನಿರ್ವಹಣೆಯನ್ನು ಸಮುದಾಯದ ಮೂಲಕ ಮುಂದುವರೆಸುವುದು

**ಶ್ರೀ ಪಟೇಲ್ ಶಿವರಾಂ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೧೮೧ (೧೬೮೪) ಸಣ್ಣ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ರಾಜ್ಯದ ಕೆರೆಗಳ ನಿರ್ವಹಣೆಯನ್ನು ಸಮುದಾಯದ ಮೂಲಕ ನಿರ್ವಹಿಸಬೇಕೆಂದು ಸರ್ಕಾರ ೨೦೦೦ನೇ ಸಾಲಿನಿಂದಲೇ ನಿರ್ಧರಿಸಿರುವುದೆ;

(ಆ) ಮೇಲಿನ ಯೋಜನೆಯಂತೆ ಎಷ್ಟು ಕೆರೆಗಳನ್ನು ಸಮುದಾಯದ ಮೂಲಕ ಅಭಿವೃದ್ಧಿಪಡಿಸಿವೆ ; ಸಂಘಗಳು ಹಾಗೂ ಎಷ್ಟು ಕೆರೆಗಳನ್ನು ಕೆರೆ ಸಂಘಗಳು ನಿರ್ವಹಿಸುತ್ತಿವೆ ;

(ಇ) ಕೆರೆ ಅಭಿವೃದ್ಧಿ ಮತ್ತು ನಿರ್ವಹಣೆಯನ್ನು ಸಮುದಾಯಕ್ಕೆ ವಹಿಸುವ ಈ ಯೋಜನೆ ೨ ವರ್ಷದಿಂದ ಸ್ಥಗಿತವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಈ) ಈ ಯೋಜನೆಯನ್ನು ಮುಂದುವರಿಸಲು ಸರ್ಕಾರ ಕೈಗೊಳ್ಳುವ ಕ್ರಮಗಳೇನು?

## ೨೦೧೪–೧೫ನೇ ಸಾಲಿನ ಶೈಕ್ಷಣಿಕ ವರ್ಷದ ಐ.ಟಿ.ಐ.೨ನೇ ಸೆಮಿಸ್ಟರ್‌ನ ಫಲಿತಾಂಶ

**ಶ್ರೀ ಮರಿತಿಬ್ಬೇಗೌಡ (ಶಿಕ್ಷಕರ ಕ್ಷೇತ್ರ) –**

೧೮೨ (೧೬೭೮) ಕಾರ್ಮಿಕ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ೨೦೧೪–೧೫ನೇ ಸಾಲಿನ ಶೈಕ್ಷಣಿಕ ವರ್ಷದ ಐ.ಟಿ.ಐ. ತರಬೇತಿಯ ೨ನೇ ಸೆಮಿಸ್ಟರ್‌ನ ಫಲಿತಾಂಶ ಪ್ರಕಟವಾಗದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಈ ವಿಳಂಬಕ್ಕೆ ಕಾರಣಗಳೇನು ; (ವಿವರ ನೀಡುವುದು)

(ಆ) ಯಾವ ಕಾಲಮಿತಿಯಲ್ಲಿ ಫಲಿತಾಂಶ ನೀಡಲಾಗುವುದು ;

(ಇ) ೨ನೇ ಸೆಮಿಸ್ಟರ್ ಫಲಿತಾಂಶ ಪ್ರಕಟಗೊಳಿಸದೆ ೩ನೇ ಸೆಮಿಸ್ಟರ್ ಫಲಿತಾಂಶ ಪ್ರಕಟಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಈ) ೩ನೇ ಸೆಮಿಸ್ಟರ್ ಫಲಿತಾಂಶದಲ್ಲಿ ಪಾಸು ಫೇಲಿನ ಬಗ್ಗೆ ಗೊಂದಲ ಉಂಟಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಈ ಗೊಂದಲಕ್ಕೆ ಕಾರಣಗಳೇನು ; (ವಿವರ ನೀಡುವುದು)

(ಉ) ಗೊಂದಲ ಸರಿಪಡಿಸಲು ಕೈಗೊಂಡಿರುವ ಕ್ರಮಗಳೇನು ? (ವಿವರ ನೀಡುವುದು)

## ಆಲಮಟ್ಟಿ ಅಣೆಕಟ್ಟಿನ ಎತ್ತರ ಹೆಚ್ಚಿಸುವ ಬಗ್ಗೆ

**ಶ್ರೀ ಕ್ಯಾಪ್ಟನ್ ಗಣೇಶ್ ಕಾರ್ಣಿಕ್ (ಶಿಕ್ಷಕರ ಕ್ಷೇತ್ರ) –**

೧೮೩ (೧೭೦೯) ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಆಲಮಟ್ಟಿ ಅಣೆಕಟ್ಟಿನ ಎತ್ತರವನ್ನು ೫೨೪ ಮೀಟರ್‌ಗೆ ಹೆಚ್ಚಿಸುವ ಕುರಿತು ಸರ್ಕಾರ ಏನು ಕ್ರಮ ಕೈಗೊಂಡಿದೆ ;

(ಆ) ಈ ಅಣೆಕಟ್ಟಿನ ಎತ್ತರವನ್ನು ಹೆಚ್ಚಿಸುವುದರಿಂದ ಎಷ್ಟು ಗ್ರಾಮಗಳನ್ನು ಸ್ಥಳಾಂತರಿಸಬೇಕಾಗುತ್ತದೆ ;

(ಇ) ಈ ಯೋಜನೆಗೆ ಎಷ್ಟು ಎಕರೆ ಜಮೀನನ್ನು ಸ್ವಾಧೀನಪಡಿಸಿಕೊಳ್ಳಲಾಗಿದೆ ;

(ಈ) ಈ ಯೋಜನೆಗೆ ಒಟ್ಟು ಅಂದಾಜು ಮಾಡಲಾದ ಹಣದ ಮೊತ್ತವೆಷ್ಟು ;

(ಉ) ಈ ಯೋಜನೆಯನ್ನು ಯಾವಾಗ ಪೂರ್ಣಗೊಳಿಸಲಾಗುವುದು ?

**ಕಾರ್ಮಿಕರ ಮಕ್ಕಳ ಶೈಕ್ಷಣಿಕ ಕಾರ್ಯಕ್ರಮಗಳ ಕುರಿತು**

**ಶ್ರೀ ಡಿ.ಎಸ್. ವೀರಯ್ಯ (ವಿಧಾನಸಭೆಯಿಂದ ಚುನಾಯಿತರಾದವರು) –**

೧೮೪ (೧೩.೨೦) ಕಾರ್ಮಿಕ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಕಾರ್ಮಿಕ ಇಲಾಖೆಯಿಂದ ಕಾರ್ಮಿಕರ ಮಕ್ಕಳಿಗೆ ಶೈಕ್ಷಣಿಕ ಅಭಿವೃದ್ಧಿಗಾಗಿ ಇರುವ ಸೌಲಭ್ಯಗಳು ಮತ್ತು ಕಾರ್ಯಕ್ರಮಗಳು ಯಾವುವು ;

(ಆ) ರಾಜ್ಯದ ಯಾವ ಯಾವ ಜಿಲ್ಲೆಗಳಲ್ಲಿ ಏನೇನು ಸೌಲಭ್ಯಗಳನ್ನು ನೀಡಲಾಗಿದೆ? (ಫಲಾನುಭವಿಗಳ ಹೆಸರು ಮತ್ತು ವಿಳಾಸ ಸಹಿತ ವಿವರ ನೀಡುವುದು)

**ಚಚಡಿ–ಮುರಗೋಡ ಏತ ನೀರಾವರಿ ಕೆಲಸ ಪ್ರಾರಂಭಿಸುವ ಬಗ್ಗೆ**

**ಶ್ರೀ ಮಹಾಂತೇಶ್ ಶಿವಾನಂದ ಕೌಜಲಗಿ (ಪದವೀಧರರ ಕ್ಷೇತ್ರ) –**

೧೮೫ (೧೭.೨೧) ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಚಚಡಿ–ಮುರಗೋಡ ಏತ ನೀರಾವರಿ ಕಾಮಗಾರಿ ಕೈಗೊಳ್ಳಲು ಆಡಳಿತಾತ್ಮಕ ಹಾಗೂ ತಾಂತ್ರಿಕ ಮಂಜೂರಾತಿಯನ್ನು ನೀಡಲಾಗಿದ್ದು ಯಾವಾಗ ;

(ಆ) ಪ್ರಸ್ತುತ ಕಾಮಗಾರಿಯು ಯಾವ ಹಂತದಲ್ಲಿದೆ ;

(ಇ) ಈ ಯೋಜನೆಯಿಂದ ಎಷ್ಟು ಎಕರೆ ಜಮೀನು ನೀರಾವರಿಗೆ ಒಳಪಡುವುದು; (ತಾಲ್ಲೂಕುವಾರು, ಗ್ರಾಮವಾರು, ಎಕರೆವಾರು ವಿವರ ನೀಡುವುದು)

(ಈ) ಈ ಕಾಮಗಾರಿಯನ್ನು ಯಾವ ಕಾಲಮಿತಿಯೊಳಗೆ ಪ್ರಾರಂಭಿಸಲಾಗುವುದು;

(ಉ) ಈ ಯೋಜನೆಯ ಕಾಮಗಾರಿಗೆ ಒದಗಿಸಲಾಗಿರುವ ಹಣ ಎಷ್ಟು ; ಮಂಜೂರು ಮಾಡಲಾಗಿರುವ ಹಣ ಎಷ್ಟು ? (ವಿವರ ನೀಡುವುದು)

## ಕರ್ನಾಟಕ ಗೇರು ಅಭಿವೃದ್ಧಿ ನಿಗಮ ಲಾಭದ ಬಗ್ಗೆ

**ಶ್ರೀ ಐವನ್ ಡಿ'ಸೋಜಾ (ನಾಮನಿರ್ದೇಶನ ಹೊಂದಿದವರು) –**

೧೮೬ (೧೭೦೩) ಅರಣ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಕರ್ನಾಟಕ ಗೇರು ಅಭಿವೃದ್ಧಿ ನಿಗಮ ಲಾಭದಲ್ಲಿ ಇದೆಯೇ ; ನೆಡುತೋಪುಗಾಗಿ ಪಡೆದ ಸಾಲವನ್ನು ಪಾವತಿಸಲಾಗಿದೆಯೇ ; ಈ ಯೋಜನೆಯಿಂದ ಉಂಟಾದ ನಷ್ಟಕ್ಕೆ ನಿಗಮ ಕೈಗೊಂಡ ಕ್ರಮವೇನು ;

(ಆ) ಕರ್ನಾಟಕದ ಗೇರು ಅಭಿವೃದ್ಧಿ ನಿಗಮದಿಂದ ೨೦೧೩–೧೪ ಮತ್ತು ೨೦೧೪–೧೫ನೇ ಸಾಲಿನಲ್ಲಿ ಅಭಿವೃದ್ಧಿಪಡಿಸಿದ ಗೇರುತೋಟ ಎಷ್ಟು ; ವಿನಿಯೋಗಿಸಿದ ಹಣ ಎಷ್ಟು ;

(ಇ) ಪ್ರಸ್ತುತ ನಿಗಮದಲ್ಲಿ ಕಾರ್ಯನಿರ್ವಹಿಸುತ್ತಿರುವ ನೌಕರರ ಸಂಖ್ಯೆ ಎಷ್ಟು ; ನಿಗಮಕ್ಕೆ ಬರುವ ಆದಾಯ ಎಷ್ಟು ; ನೌಕರರಿಗೆ ನೀಡುವ ವೇತನದ ಮೊತ್ತ ಎಷ್ಟು ; (ವಿವರ ನೀಡುವುದು)

(ಈ) ಗೇರು ಕೃಷಿಯನ್ನು ರಚಿಸಿ, ಗೇರು ಕೃಷಿ ಪ್ರೋತ್ಸಾಹಿಸುವ ಯೋಜನೆ ಸರ್ಕಾರದ ಮುಂದಿದೆಯೇ ? (ಇದ್ದರೆ, ವಿವರ ನೀಡುವುದು)

## ಆರ್.ಟಿ.ಸಿ./ಪಹಣಿ ವಿಸ್ತೀರ್ಣ ತಾಳೆಯಾಗದಿರುವ ಬಗ್ಗೆ

**ಶ್ರೀ ಆರ್. ಚೌಡರೆಡ್ಡಿ ತೂಪಲ್ಲಿ (ಪದವೀಧರರ ಕ್ಷೇತ್ರ) –**

೧೮೭ (೧೭೮೭) ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ರಾಜ್ಯದ ಲಕ್ಷಾಂತರ ರೈತರ ಜಮೀನಿನ ಆರ್.ಟಿ.ಸಿ./ಪಹಣಿ ಕಾಲಂ ೩ ಮತ್ತು ೯ ಗಳಲ್ಲಿ ಜಮೀನಿನ ಖಾತೆವಾರು ವಿಸ್ತೀರ್ಣ ತಾಳೆಯಾಗದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಬಂದಿದ್ದಲ್ಲಿ, ಇದನ್ನು ಸರಿಪಡಿಸಲು ಸರ್ಕಾರ ಯಾವ ಕ್ರಮಗಳನ್ನು ಕೈಗೊಂಡಿದೆ (ಮಾಹಿತಿ ನೀಡುವುದು)

(ಇ) ಯಾವ ಕಾಲಮಿತಿಯಲ್ಲಿ ಇದನ್ನು ಸರಿಪಡಿಸಲಾಗುವುದು ;

(ಈ) ಇದರಿಂದ ರಾಜ್ಯದಲ್ಲಿರುವ ರೈತರಿಗೆ ತುಂಬಾ ತೊಂದರೆ ಆಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

## ITI ಕಾಲೇಜುಗಳಲ್ಲಿನ ಖಾಲಿ ಹುದ್ದೆಗಳ ಭರ್ತಿ ಕುರಿತು

**ಶ್ರೀ ಅರುಣ ಶಹಾಪುರ (ಶಿಕ್ಷಕರ ಕ್ಷೇತ್ರ) –**

೧೮೮ (೧೬೮೩) ಕಾರ್ಮಿಕ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಸರ್ಕಾರಿ ITI ಕಾಲೇಜುಗಳಲ್ಲಿ ಇರುವ ಸಿಬ್ಬಂದಿ ಎಷ್ಟು ; ಖಾಲಿ ಇರುವ ಸಿಬ್ಬಂದಿಗಳ ಸಂಖ್ಯೆ ಎಷ್ಟು ;

(ಆ) ಆ ಪೈಕಿ ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರ ಕೈಗೊಂಡ ಕ್ರಮಗಳೇನು ;

(ಇ) ಹಿಂದಿನ ನೇಮಕಾತಿ ಪ್ರಕ್ರಿಯೆಯನ್ನು ಮಾಡಲಾಗಿದ್ದು ಯಾವಾಗ ;

(ಈ) ಎಷ್ಟು ಜನರನ್ನು ನೇಮಕಾತಿ ಮಾಡಲಾಯಿತು ; ಅದರಲ್ಲಿ ಎಷ್ಟು ಜನರ (Probationary) ಪೂರ್ಣಾವಧಿಯನ್ನು ಘೋಷಣೆ ಮಾಡಲಾಗಿದೆ ? (ವಿಜಯಪುರ, ಬಾಗಲಕೋಟೆ ಮತ್ತು ಬೆಳಗಾವಿ ಜಿಲ್ಲೆಗಳ ಸಂಪೂರ್ಣ ವಿವರ ನೀಡುವುದು)

## ಪಹಣಿ ಮತ್ತು ಮೊಕದ್ದಮೆಗಳು

**ಶ್ರೀ ಅಶ್ವತ್ ನಾರಾಯಣ (ವಿಧಾನಸಭೆಯಿಂದ ಚುನಾಯಿತರಾದವರು) –**

೧೮೯ (೧೬೯೭) ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಕಳೆದ ೫ ವರ್ಷಗಳಲ್ಲಿ ರಾಜ್ಯದಲ್ಲಿ ಹೊಸದಾಗಿ ಪಹಣಿದಾರರು ಜಮೀನು ಖರೀದಿ ಮಾಡಿದಾಗ ಜಮೀನಿನ ಬೆಲೆಯು ೨ ಲಕ್ಷಕ್ಕಿಂತಲೂ ಹೆಚ್ಚು ಮೀರಿದಾಗ ೭೯/ಎ ಮತ್ತು ೭೯/ಬಿ ಅಡಿಯಲ್ಲಿ ಹಾಕಿರುವ ಮೊಕದ್ದಮೆಗಳು ಎಷ್ಟು ;

(ಆ) ಅಂತಹ ಪ್ರಕರಣದಲ್ಲಿ ಸರ್ಕಾರದ ಪರವಾಗಿ ಎಷ್ಟು ಜಮೀನು ಮುಟ್ಟುಗೋಲು ಹಾಕಿಕೊಳ್ಳಲಾಗಿದೆ ;

(ಇ) ಪ್ರಸ್ತುತ ಬಾಕಿ ಇರುವ ಮೊಕದ್ದಮೆಗಳೆಷ್ಟು ;

(ಈ) ಈ ತಕರಾರು ಮೊಕದ್ದಮೆ ಹಾಕುವ ಅವಶ್ಯಕತೆ ಇರುವುದೇ ?

## ಗದಗ ಜಿಲ್ಲೆ ಕಪ್ಪತ್ತಗುಡ್ಡವನ್ನು ವನ್ಯಜೀವಿಧಾಮ ಎಂದು ಘೋಷಿಸುವ ಕುರಿತು

**ಶ್ರೀ ಎಸ್.ವ್ಹಿ. ಸಂಕನೂರ (ಪದವೀಧರರ ಕ್ಷೇತ್ರ) –**

೯೯೦ (೧೭೨೬) ಅರಣ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಗದಗ ಜಿಲ್ಲೆ ಕಪ್ಪತ್ತಗುಡ್ಡವನ್ನು ವನ್ಯಜೀವಿಧಾಮ ಎಂದು ಘೋಷಣೆ ಮಾಡಲು ಸರ್ಕಾರ ನಿರ್ಣಯ ಕೈಗೊಂಡಿದೆಯೇ ;

(ಆ) ಈ ಗುಡ್ಡವನ್ನು ವನ್ಯಜೀವಿಧಾಮವಾಗಿ ಘೋಷಣೆ ಮಾಡಲು ಯಾವುದಾದರೂ ತೊಂದರೆಗಳಿವೆಯೇ ;

(ಇ) ವನ್ಯಜೀವಿಧಾಮ ಎಂದು ಘೋಷಣೆ ಮಾಡಬೇಕೆಂದು ಈ ಭಾಗದ ಜನರ ಒಕ್ಕೊರಲಿನ ಒತ್ತಾಯವಿದ್ದು, ಯಾವಾಗ ಘೋಷಣೆ ಮಾಡಲಾಗುವುದು ?

## ಸರ್ಕಾರಿ ಭೂಮಿ ಲಭ್ಯತೆ

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೯೯೧ (೧೭೦೮) ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಉಡುಪಿ ಜಿಲ್ಲಾ ಮತ್ತು ದಕ್ಷಿಣ ಕನ್ನಡ ಜಿಲ್ಲಾ ವ್ಯಾಪ್ತಿಯಲ್ಲಿರುವ ಸರ್ಕಾರಿ ಗೋಮಾಳ, ಅರಣ್ಯ ಭೂಮಿ ಎಷ್ಟು ; (ತಾಲ್ಲೂಕುವಾರು ವಿವರ ನೀಡುವುದು)

(ಆ) ನಿವೇಶನ ರಹಿತರಿಗೆ ''ವಸತಿ ನಿವೇಶನ'' ಕ್ಕಾಗಿ ಕಾಯ್ದಿರಿಸಿದ ಮತ್ತು ಗ್ರಾಮ ಪಂಚಾಯತ್‌ಗಳಿಗೆ ಹಸ್ತಾಂತರಿಸಿದ ಭೂಮಿ ಎಷ್ಟು ; (ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಯ ತಾಲ್ಲೂಕುವಾರು ವಿವರ ನೀಡುವುದು)

(ಇ) ಗ್ರಾಮ ಪಂಚಾಯತ್‌ಗಳಿಗೆ ನಿವೇಶನ ವಿತರಣೆ, ಘನ ತ್ಯಾಜ್ಯ–ದ್ರವ ತಾಜ್ಯ ವಿಲೇವಾರಿ, ಸ್ಮಶಾನಕ್ಕಾಗಿ ಅಗತ್ಯ ಸರ್ಕಾರಿ ಭೂಮಿ ಲಭ್ಯವಿಲ್ಲದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ಅಗತ್ಯ ಉದ್ದೇಶಗಳಿಗೆ ಖಾಸಗಿ ಭೂಮಿ ಖರೀದಿ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳೇನು ; (ಈ ಸಂಬಂಧ ಹೊರಡಿಸಿರುವ ಆದೇಶ, ಮಾರ್ಗ ಸೂಚಿ ಒದಗಿಸುವುದು)

(ಈ) ಖಾಸಗಿ ಭೂಮಿ ಖರೀದಿಗೆ ನಿಗದಿಪಡಿಸಿರುವ ದರ ಮಾರುಕಟ್ಟೆ ದರಕ್ಕಿಂತ ಅತಿ ಕಡಿಮೆ ಇರುವುದು ಸರ್ಕಾರ ಗಮನಿಸಿಲ್ಲವೆ ; ಗಮನಿಸಿದ್ದಲ್ಲಿ, ಈ ಬಗ್ಗೆ ಸರ್ಕಾರದ ನಿಲುವೇನು ?

## ಕಂದಾಯ ಇಲಾಖೆಯಲ್ಲಿ ಆಡಳಿತದಲ್ಲಿ "ಕಾಗದ ರಹಿತ ಕಛೇರಿ" ವ್ಯವಸ್ಥೆಯ ಸಾಧ್ಯತೆ ಬಾಧ್ಯತೆಗಳನ್ನು ಕುರಿತಂತೆ

**ಶ್ರೀ ರಾಮಚಂದ್ರಗೌಡ (ಪದವೀಧರರ ಕ್ಷೇತ್ರ) –**

೧೯೨ (೧೬೮೬) ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಕಂದಾಯ ಇಲಾಖೆಯಲ್ಲಿ ಆಡಳಿತವನ್ನು ಸರಳೀಕರಣಗೊಳಿಸಲು "ಕಾಗದ ರಹಿತ ಕಛೇರಿ" ವ್ಯವಸ್ಥೆ ಜಾರಿಗೊಳಿಸುತ್ತಿರುವುದು ನಿಜವೇ ; ಇದು ವಿಳಂಬವಾಗಲು ಕಾರಣವೇನು ; (ವಿವರ ನೀಡುವುದು)

(ಆ) ಸದರಿ ವ್ಯವಸ್ಥೆಯ ಪರಿಕಲ್ಪನೆಯೇನು ; ಉದ್ದೇಶಗಳೇನು ; (ವಿವರ ನೀಡುವುದು)

(ಇ) ಕಂದಾಯ ಇಲಾಖೆಯ ದಾಖಲೆಗಳು, ಕಡತಗಳು ನಕಾಶೆಗಳು, ಸಾರ್ವಜನಿಕರ ಆಸ್ತಿ ವಿವರಣೆಗಳ ದೀರ್ಘಾವಧಿ ರಕ್ಷಣೆಯ ಬಗ್ಗೆ ಸರ್ಕಾರ ಕೈಗೊಂಡಿರುವ ಕ್ರಮಗಳು ಯಾವುವು ;

(ಈ) ಯಾವುದೇ ವಿವರಣೆಗಳನ್ನು ಕಂಪ್ಯೂಟರ್ ಮೂಲಕ Edit ಮಾಡದಂತೆ, ನಕಾಶೆಗಳನ್ನು ಕಂಪ್ಯೂಟರ್‌ನ ವಿವಿಧ Software ಮೂಲಕ ಬದಲಾಯಿಸದಂತೆ ಅಥವಾ Edit ಮಾಡದಂತೆ ತೆಗೆದುಕೊಂಡಿರುವ ಮುನ್ನೆಚ್ಚರಿಕೆ ಕ್ರಮಗಳ ಕುರಿತು ವಿವರಿಸುವುದು; ಇದರ ಸಾಧ್ಯತೆ–ಭಾದ್ಯತೆಗಳೇನು ?

## ಕೊಡಗು ಜಿಲ್ಲೆಯ ಊರುಡವೆ ಜಾಗದಲ್ಲಿ ವಾಸಿಸುವವರ ಬಗ್ಗೆ

**ಶ್ರೀ ಟಿ. ಜಾನ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೧೯೩ (೧೩೨೪) ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಕೊಡಗು ಜಿಲ್ಲೆಯ ಊರುಡವೆ ಇರುವ ಸ್ಥಳದಲ್ಲಿ ಹಲವು ವರ್ಷಗಳಿಂದ ಮನೆ ಕಟ್ಟಿ ವಾಸಿಸುತ್ತಿರುವವರಿಗೆ ಜಾಗದ ಮಾಲೀಕತ್ವ ನೀಡಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು ;

(ಆ) ಸದರಿ ಜಾಗದಲ್ಲಿ ವಾಸಿಸುತ್ತಿರುವವರಿಗೆ ಆರ್.ಟಿ.ಸಿ. ವಿತರಿಸುವ ಕ್ರಮವನ್ನು ಸರ್ಕಾರ ಪ್ರಾರಂಭ ಮಾಡುವುದು ಯಾವಾಗ ?

## ಉಗ್ಗೇಹಳ್ಳಿ ಗ್ರಾಮದ ಪರಿಶಿಷ್ಟರ ಕಾಲೋನಿಯನ್ನು ಸ್ಥಳಾಂತರಿಸುವ ಬಗ್ಗೆ

**ಶ್ರೀಮತಿ ಎ.ವಿ. ಗಾಯತ್ರಿ ಶಾಂತೇಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೧೯೪ (೧೩೧೬) ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಮೂಡಿಗೆರೆ ತಾಲ್ಲೂಕಿನ ಹೇಮಾವತಿ ನದಿ ತೀರದಲ್ಲಿರುವ ಉಗ್ಗೇಹಳ್ಳಿಯ ಪರಿಶಿಷ್ಟರ ಕಾಲೋನಿಯ ಜನರು ಅತಿವೃಷ್ಟಿಯಿಂದ ತೀವ್ರ ಸಮಸ್ಯೆ ಎದುರಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಉಗ್ಗೇಹಳ್ಳಿ ಗ್ರಾಮದ ಪರಿಶಿಷ್ಟರ ಕಾಲೋನಿಯನ್ನು ಸ್ಥಳಾಂತರಿಸಲು ಸರ್ಕಾರ ಯಾವ ನಿರ್ದಿಷ್ಟ ಕ್ರಮಗಳನ್ನು ಕೈಗೊಳ್ಳಲಿದೆ ? (ಮಾಹಿತಿ ಒದಗಿಸುವುದು)

## ಗುಲ್ಬರ್ಗಾ ಮತ್ತು ಯಾದಗಿರಿ ಜಿಲ್ಲೆಯಲ್ಲಿ ಅರಣ್ಯ ಅಭಿವೃದ್ಧಿ

**ಶ್ರೀ ಅಲ್ಲಮಪ್ರಭು ಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೧೯೫ (೧೬೮೯) ಅರಣ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಗುಲ್ಬರ್ಗಾ ಮತ್ತು ಯಾದಗಿರಿ ಜಿಲ್ಲೆಯಲ್ಲಿರುವ ಅರಣ್ಯ ಪ್ರದೇಶ ಎಷ್ಟು ;

(ಆ) ಈ ಅರಣ್ಯ ಪ್ರದೇಶಗಳ ಅಭಿವೃದ್ಧಿಗಾಗಿ ಸರ್ಕಾರ ಕೈಗೊಂಡ ಕ್ರಮಗಳೇನು;

(ಇ) ಈ ಜಿಲ್ಲೆಯಲ್ಲಿ ಯಾವ–ಯಾವ ತಾಲ್ಲೂಕಿನಲ್ಲಿ ಹೆಚ್ಚಿನ ಅರಣ್ಯ ಅಭಿವೃದ್ಧಿ ಮಾಡಲಾಗಿದೆ ?

**ವಿ. ಶ್ರೀಶ್**
ಕಾರ್ಯದರ್ಶಿ
ಕರ್ನಾಟಕ ವಿಧಾನ ಪರಿಷತ್ತು

ಸರ್ಕಾರಿ ಮುದ್ರಣಾಲಯ, ಬೆಂಗಳೂರು, ಪಿ7, ಕಾ.ಸೂ. , ಪ್ರತಿಗಳು 1500